ಶ್ರೀ ಓಲೇಕಾರ ನೆಹರು ಚನ್ನಬಸಪ್ಪ (ಬ್ಯಾಡಗಿ) :-

1064 (1324) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

ಅ) ಬ್ಯಾಡಗಿ ಕ್ಷೇತ್ರಕ್ಕೆ ಸಂಬಂಧ ಪಟ್ಟ ಅಣೂರ ಹಾಗೂ ಅಸುಂಡಿ ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ಕೆ ಸರ್ವೆ ಮಾಡಿಸಿ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಕೆಲಸ ಪ್ರಾರಂಭ ಮಾಡದಿರಲು ಕಾರಣವೇನು;

ಇ) ಬರದಿದ್ದಲ್ಲಿ, ಇನ್ನೂ ಯಾವ ಹಂತದಲ್ಲಿದೆ;

ಈ) ಅಪ್ಪರ್ ತುಂಗಾ ಯೋಜನೆಯಿಂದ ವಂಚಿತರಾಗಿರುವ ಬ್ಯಾಡಗಿ ಕ್ಷೇತ್ರಕ್ಕೆ ಅಂತರ ಜಲ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಈ ಕೆಲಸ ಮಾಡಲು ಸಿದ್ದವಿದೆಯೇ; ಹಾಗಾದರೆ ಯಾವಾಗ ಹಣ ಒದಗಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :-

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಅಂತರ್ಜಲದ ನೀರಿನ ಮಟ್ಟವನ್ನು ಹೆಚ್ಚಿಸುವ ವಿಷಯವು ಜಲಸಂಪನ್ಮೂಲ ಇಲಾಖೆಯ (ಭಾರಿ ಮತ್ತು ಮಧ್ಯಮ ನೀರಾವರಿ) ವ್ಯಾಪ್ತಿಯಲ್ಲಿ ಬರುವುದಿಲ್ಲ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) :-

1065 (1229) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

ಅ) ತುಂಗಾ ಮೇಲ್ದಂಡೆ ಯೋಜನೆಯು ಪ್ರಾರಂಭವಾದಾಗ ಇದಕ್ಕೆ ನಿಗದಿಪಡಿಸಿದ ಮೊತ್ತ ಎಷ್ಟು;

ಆ) ಇದುವರೆಗೂ ಖರ್ಚು ಮಾಡಿದ ಮೊತ್ತವೆಷ್ಟು; ಇನ್ನು ಎಷ್ಟು ಖರ್ಚು ಮಾಡಬೇಕಾಗಿದೆ;

ಇ) ಹಿರೇಕೆರೂರು ತಾಲ್ಲೂಕಿನಲ್ಲಿ ಈ ಯೋಜನೆಯಲ್ಲಿನ ಕಾಲುವೆ ನಿರ್ಮಾಣ ಮತ್ತು ಲೈನಿಂಗ್ ಕಾಮಗಾರಿಯಲ್ಲಿ ಕಳಪೆ ಕಾಮಗಾರಿ ನಡೆದಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ತಪ್ಪಿತಸ್ಥ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :–

ಅ) 1988–89ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಲಾಗಿದ್ದ ತುಂಗಾ ಮೇಲ್ದಂಡೆ ಯೋಜನೆಯ ಮೂಲ ಅಂದಾಜಿಗೆ ಸರ್ಕಾರದ ಆದೇಶ ಸಂಖ್ಯೆ: ನೀಇ 25 ಎಂಎಂಎಂ 91, ದಿನಾಂಕ: 03–10–1991 ರಲ್ಲಿ ರೂ. 271.41 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಪ್ರಾರಂಭಿಸಲಾಗಿರುತ್ತದೆ. 1998 ರಿಂದ ಸದರಿ ಯೋಜನೆಯು ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಕಾರ್ಯಗತವಾಗುತ್ತಿದೆ.

ಆ) ಪ್ರಾರಂಭದಿಂದ ಜೂನ್ 2007 ರವರೆಗೆ ತುಂಗಾ ಮೇಲ್ದಂಡೆ ಯೋಜನೆಗಾಗಿ ರೂ. 749.48 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. 2003–04ನೇ ಸಾಲಿನ ದರ ಪಟ್ಟಿಯನ್ವಯ ಸದರಿ ಯೋಜನೆಯ ಅಂದಾಜು ಮೊತ್ತವು ರೂ. 1644.11 ಕೋಟಿಗಳಾಗುವುದಾಗಿ ಅಂದಾಜಿಸಲಾಗಿದೆ. ಯೋಜನೆಯನ್ನು ಪೂರ್ಣಗೊಳಿಸಲು ಇನ್ನು ಸುಮಾರು ರೂ. 895 ಕೋಟಿ ಬೇಕಾಗುವುದು.

ಇ) ಹಿರೇಕೆರೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ನಾಲೆಯ ಸರಪಳಿ:ಕಿ.ಮೀ. 90.00 ರಿಂದ ಕಿ.ಮೀ. 156.00 ವರೆಗಿನ ಲೈನಿಂಗ್ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಿ.ಮೀ. 98, 104 ಮತ್ತು 115 ರಲ್ಲಿ ಸರ್ಫೇಸ್ ಕ್ರ್ಯಾಕ್ ಸೇರಿದಂತೆ ಕೆಲವು ನ್ಯೂನ್ಯತೆಗಳು ಕಂಡುಬಂದಿದ್ದವು. ಅವುಗಳನ್ನು ಸರಿಪಡಿಸಲು ಸಂಬಂಧಿಸಿದ ಗುತ್ತಿಗೆದಾರರಿಗೆ ಕರ್ನಾಟಕ ನೀರಾವರಿ ನಿಗಮದಿಂದ ಸೂಚಿಸಲಾಗಿರುತ್ತದೆ. ಥರ್ಡ್ ಪಾರ್ಟಿ ಏಜೆನ್ಸಿಯಾಗಿ ಬೆಂಗಳೂರಿನ ಟಿ.ಎಫ್.ಆರ್.ಐ. ಸಂಸ್ಥೆಯನ್ನು ಗುಣ ನಿಯಂತ್ರಣ ಪರೀಕ್ಷೆಗಾಗಿ ನೇಮಿಸಲಾಗಿದೆ. ಕಾಮಗಾರಿ ಬಿಲ್ಲುಗಳನ್ನು ಪಾರ್ಟ್ ರೇಟ್‌ಗಳಂತೆ ಪಾವತಿಸಲಾಗುತ್ತಿದ್ದು, ಥರ್ಡ್ ಪಾರ್ಟಿ ಏಜೆನ್ಸಿಯಿಂದ ವರದಿಗಳು ಬಂದ ಮೇಲೆ ಅದರಂತೆ, ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಮೇಲಿನ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಂಡುಬಂದಿರುವ ನ್ಯೂನ್ಯತೆಗಳನ್ನು ಸರಿಪಡಿಸಲು ಸಂಬಂಧಿಸಿದ ಗುತ್ತಿಗೆದಾರರಿಗೆ ಕರ್ನಾಟಕ ನೀರಾವರಿ ನಿಗಮದಿಂದ ಸೂಚಿಸಲಾಗಿದ್ದು, ಅದರಂತೆ ಕ್ರಮಗಳು ಆಗುತ್ತಿದೆ.